ಕಂ/ಉಪಲೋಕ್/ಬಿಜಿಎಂ/1344/2021
ಪಿಓ.ಎ.ಆರ್.ಇ-5

284

**ಕರ್ನಾಟಕ ಲೋಕಾಯುಕ್ತ**

**ಕಂಪ್ಲೆಂಟ್/ಉಪಲೋಕ್/ಬಿಜಿಎಂ/1284/2021**
**ಪಿಓ.ಎ.ಆರ್.ಇ-5(ಮಂಡನಾಧಿಕಾರಿಗಳು)**

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ ವೀಧಿ,
ಬೆಂಗಳೂರು ದಿನಾಂಕ: 22/12/2021

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ**

**ವಿಷಯ:** 1) **ಶ್ರೀ ಲೋಕಿಕೆರೆ ಕೆಂಚಪ್ಪ ಪ್ರಕಾಶಕುಮಾರ ಬಿನ್ ಕೆಂಚಪ್ಪ, ಅಭಿವೃದ್ಧಿ ಅಧಿಕಾರಿ / ಕಾರ್ಯಪಾಲಕ ಅಭಿಯಂತರರು (ನಿವೃತ್ತ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಳಗಾವಿ.**

2) **ಶ್ರೀ ಬಸವರಾಜ ಅಡಿವೆಪ್ಪಾ ಪೂಜೇರ ಬಿನ್ ಅಡಿವೆಪ್ಪಾ, ಮೀಟರ್ ರೀಡರ್ / ವಿಷಯ ನಿರ್ವಾಹಕ (ನಿವೃತ್ತ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಳಗಾವಿ**

ಇವರು ಸರ್ಕಾರಿ ನೌಕರರಾಗಿ ಸರ್ಕಾರಿ ಕೆಲಸ ನಿರ್ವಹಿಸುವ ಕಾಲಕ್ಕೆ ದುರ್ನಡತೆ ಎಸಗಿರುವ ಕುರಿತಂತೆ ಶಿಸ್ತು ನಡವಳಿ ಜರುಗಿಸುವ ಬಗ್ಗೆ.

****

1. ಆರಕ್ಷಕ ಉಪಾಧೀಕ್ಷಕರು ಭ್ರಷ್ಟಾಚಾರ ನಿಗ್ರಹ ದಳ ಪೋಲಿಸ್ ಠಾಣೆ ಬೆಳಗಾವಿ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಸಲಾಗಿ. **1) ಶ್ರೀ ಲೋಕಿಕೆರೆ ಕೆಂಚಪ್ಪ ಪ್ರಕಾಶಕುಮಾರ ಬಿನ್ ಕೆಂಚಪ್ಪ, ಅಭಿವೃದ್ಧಿ ಅಧಿಕಾರಿ / ಕಾರ್ಯಪಾಲಕ ಅಭಿಯಂತರರು (ನಿವೃತ್ತ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಳಗಾವಿ 2) ಶ್ರೀ ಬಸವರಾಜ ಅಡಿವೆಪ್ಪಾ ಪೂಜೇರ ಬಿನ್ ಅಡಿವೆಪ್ಪಾ, ಮೀಟರ್ ರೀಡರ್ / ವಿಷಯ ನಿರ್ವಾಹಕ (ನಿವೃತ್ತ), ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಳಗಾವಿ** (ಇನ್ನು ಮುಂದೆ ಕ್ರಮವಾಗಿ ಎದುರುದಾರರು-1 & 2 ಎಂದು ಕರೆಯಲ್ಪಡುತ್ತಾರೆ) ಆದ ನಿಮ್ಮಗಳ ಮೇಲೆ **ಶ್ರೀ.ಇಮ್ತಿಯಾಜಅಹಮ್ಮದ ನಜೀರಅಹಮ್ಮದ್ ತಹಶೀಲ್ದಾರ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ). ಇವರು ದೂರು ಸಲ್ಲಿಸಿದ್ದು, ದೂರಿನಲ್ಲಿ ಕಣಬುರ್ಗಿ ಇಂಡಸ್ಟ್ರೀಯಲ್ ಏರಿಯಾದಲ್ಲಿ ಸರ್ವೆ ನಂ. 614 ರಲ್ಲಿ, ಪ್ಲಾಟ್ ನಂ. 935/ಐ, ಹಂಚಿಕೆಯಾಗಿದ್ದು ಸದರಿ ಸೈಟು ದಿ: 04/01/2003 ರಲ್ಲಿ ದೂರುದಾರರ ಪರವಾಗಿ ಲೀಸ್ ಕಂ ಸೇಲ್ ಆಗಿರುತ್ತದೆ. ಸದರಿ ಪ್ಲಾಟ್‌ನ್ನು

ಕ್ರಯ ಮಾಡಿಕೊಡಲು ದಿ: 21/02/2013 ರಂದು ದೂರುದಾರರು ಅರ್ಜಿ ಸಲ್ಲಿಸಿದ್ದು, ಆಗ 2ನೇ ಎದುರುದಾರರನ್ನು ಭೇಟಿಯಾಗಿದ್ದು ಸದರಿಯವರು ರೂ. 50,000/– ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದರಿಂದ ದೂರುದಾರರು ಹಣವಿಲ್ಲವಾದ್ದರಿಂದ ಸುಮ್ಮನಾಗಿದ್ದರು. ನಂತರ ದಿ: 07/01/2017 ರಂದು ಕ್ರಯ ಮಾಡಿಕೊಡಲು ಅರ್ಜಿ ಸಲ್ಲಿಸಿದ್ದು ತಮ್ಮ ಮಾವನವರಾದ ಮಹಮ್ಮದ್‌ಶರೀಫ್ ಮಕ್ತುಮ್‌ಹುಸೇನ್ ಸೌದಾಗರ್ ಇವರನ್ನು ಕರೆದುಕೊಂಡು 2ನೇ ಎದುರುದಾರರನ್ನು ಭೇಟಿಯಾದಾಗ ಅವರು 22,000/– ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರಿಂದ, ದಿ: 22/03/2017ರಂದು 1ನೇ ಎದುರುದಾರರನ್ನು ಭೇಟಿಯಾಗಿದ್ದು, ಸದರಿಯವರು 2ನೇ ಎದುರುದಾರರನ್ನು ಕರೆದು 15,000/– ರೂ.ಲಂಚ ನೀಡಿದರೆ ಕೆಲಸ ಮಾಡಿಕೊಡಲು ಸೂಚನೆ ನೀಡಿರುತ್ತಾರೆಂದು ದೂರು ಸಲ್ಲಿಸಿದ್ದು, ಸದರಿ ದೂರು ಬೆಳಗಾವಿ ಎ.ಸಿ.ಬಿ ಪೋಲಿಸ್ ಠಾಣಾ ಗುನ್ನಾ ನಂ. 05/2017 ರಲ್ಲಿ ದಿ: 22/03/2017ರಂದು ದಾಖಲಾಗಿದ್ದು, ತನಿಖಾಧಿಕಾರಿಗಳು ತನಿಖೆಯನ್ನು ಪೂರೈಸಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 7, 13(1)(ಡಿ) ರೆ/ವಿ 13(2) ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ದೋಷರೋಪಣ ಪಟ್ಟಿಯನ್ನು ಪರಿಶೀಲಿಸಲಾಗಿ ಎದುರುದಾರರಾದ ನೀವು ಸರ್ಕಾರಿ ನೌಕರರಾಗಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ಒಟ್ಟು 15,000/–ರೂ. ಹಣವನ್ನು ಲಂಚವಾಗಿ ಪಡೆದು ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 7(1) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಇವರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

**2. ಎದುರುದಾರರ ಮೇಲಿನ ಆಪಾದನೆಯ ಸಂಕ್ಷಿಪ್ತ ಸಾರಾಂಶ:**

i. ದೂರುದಾರರಾದ **ಶ್ರೀ.ಇಮ್ತಿಯಾಜ ಅಹಮ್ಮದ ನಜೀರಅಹಮ್ಮದ್ ತಹಶೀಲ್ದಾರ,** ಇವರಿಗೆ ಕಣಬುರ್ಗಿ ಇಂಡಸ್ಟ್ರೀಯಲ್ ಏರಿಯಾದಲ್ಲಿ ಸರ್ವೆ ನಂ. 614 ರಲ್ಲಿ, ಪ್ಲಾಟ್ ನಂ. 935/ಐ, ಹಂಚಿಕೆಯಾಗಿದ್ದು ಸದರಿ ಸೈಟು ದಿ: 04/01/2003 ರಲ್ಲಿ ದೂರುದಾರರ ಪರವಾಗಿ ಲೀಸ್ ಕಂ ಸೇಲ್ ಆಗಿರುತ್ತದೆ. ಸದರಿ ಪ್ಲಾಟ್‌ನ್ನು ಕ್ರಯ ಮಾಡಿಕೊಡಲು ದಿ: 21/02/2013 ರಂದು ದೂರುದಾರರು ಅರ್ಜಿ ಸಲ್ಲಿಸಿದ್ದು, ಆಗ 2ನೇ ಎದುರುದಾರರನ್ನು ಭೇಟಿಯಾಗಿದ್ದು ಸದರಿಯವರು ರೂ. 50,000/– ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದರಿಂದ ದೂರುದಾರರು ಹಣವಿಲ್ಲವಾದ್ದರಿಂದ ಸುಮ್ಮನಾಗಿದ್ದರು. ನಂತರ ದಿ: 07/01/2017 ರಂದು ಕ್ರಯ ಮಾಡಿಕೊಡಲು ಅರ್ಜಿ ಸಲ್ಲಿಸಿದ್ದು ತಮ್ಮ ಮಾವನವರಾದ ಮಹಮ್ಮದ್‌ಶರೀಫ್ ಮಕ್ತುಮ್‌ಹುಸೇನ್ ಸೌದಾಗರ್ ಇವರನ್ನು ಕರೆದುಕೊಂಡು 2ನೇ ಎದುರುದಾರರನ್ನು ಭೇಟಿಯಾಗಲು 22,000/– ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರಿಂದ, ದಿ: 22/03/2017ರಂದು 1ನೇ ಎದುರುದಾರರನ್ನು ಭೇಟಿಯಾದಾಗ ಸದರಿಯವರು 2ನೇ ಎದುರುದಾರರನ್ನು ಕರೆದು

15,000/- ರೂ.ಲಂಚ ನೀಡಿದರೆ ಕೆಲಸ ಮಾಡಿಕೊಡಲು ಸೂಚನೆ ನೀಡಿರುತ್ತಾರೆ. ಸದರಿ ಸಂಭಾಷಣೆಯನ್ನು ದೂರುದಾರರ ಮಾವನವರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

ii) ದೂರುದಾರರಿಗೆ ಲಂಚ ನೀಡಲು ಮನಸ್ಸಿಲ್ಲವಾದ್ದರಿಂದ ದಿ:23/03/2017ರಂದು ತಮ್ಮ ಮಾವನಾದ ಮಹ್ಮದ್‌ಷರೀಫ ಇವರೊಂದಿಗೆ ಬೆಳಗಾವಿ ಎಸಿಬಿ ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದು, ಸದರಿ ದೂರು ಠಾಣಾ ಗುನ್ನಾ ನಂ. 05/2017 ರಲ್ಲಿ ಕಲಂ 7, 13(1) (ಡಿ) ಸಹ ವಾಚಕ 13(2) ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿಯಲ್ಲಿ ಪ್ರಕರಣವು ದಾಖಲಾಗಿರುತ್ತದೆ. ಪ್ರಕರಣವು ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಮಾರುತಿ ಮೋಂಡೆ (ನೆರಳುಸಾಕ್ಷಿ), 2) ಪ್ರಕಾಶ ಕೋಟಿ ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರುಗಳ ಸಮಕ್ಷಮ ದೂರುದಾರರು ಮತ್ತು ಅವರ ಮಾವನವರು ಹಾಜರುಪಡಿಸಿದ ಮೊಬೈಲ್‌ನಲ್ಲಿರುವ ಸಂಭಾಷಣೆಯನ್ನು ಸಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ. ಸದರಿ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ, ಎದುರುದಾರರು ಲಂಚಕ್ಕಾಗಿ ಬೇಡಿಕೆಯಿಟ್ಟಿರುವುದು ಕಂಡು ಬರುತ್ತದೆ. ಲಂಚ ನೀಡಲು ತಂದ (ರೂ. 2000 x 3 ಮತ್ತು 500 x 18) ಒಟ್ಟು 15,000/- ರೂ.ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ಸದರಿ ನೋಟುಗಳ ನಂಬರುಗಳನ್ನು ಪಂಚರು ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ಪೋಲಿಸ್ ಸಿಬ್ಬಂದಿ ನೋಟುಗಳಿಗೆ ಫಿನಾಪ್ತಲಿನ್ ಪೌಡರನ್ನು ಸವರಿ ಸದರಿ ಹಣವನ್ನು ಪಂಚಸಾಕ್ಷಿ-2 ಪ್ರಕಾಶ್ ಕೋಟಿ ಇವರ ಮೂಲಕ ದೂರುದಾರರ ಟೀ ಶರ್ಟ್ ಕಿಸೆಯಲ್ಲಿ ಇಡಿಸಿರುತ್ತಾರೆ. ನಂತರ ಪ್ರಕಾಶ ಕೋಟಿ ಇವರ ಎರಡು ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಪ್ತಲಿನ್ ಪೌಡರನ ಗುಣಧರ್ಮಗಳನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳು ಸಾಕ್ಷಿಯಾದ ಮಾರುತಿ ಮೋಂಡೆ ಇವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಮಾನಗಳನ್ನು ಗಮನಿಸಬೇಕು ಎಂದು ಸೂಚನೆ ನೀಡಿರುತ್ತಾರೆ. ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಹಣ ಪಡೆದುಕೊಂಡ ನಂತರ ಕೈಯಿಂದ ತಲೆ ಒರೆಸಿ ಕೊಳ್ಳುವ ಮೂಲಕ ಸಂಜ್ಞೆ ನೀಡಬೇಕೆಂದು ತಿಳಿಸಿರುತ್ತಾರೆ. ಆ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ದೂರುದಾರರ ಮಾವನವರಿಗೆ ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಳ್ಳಲು ತಿಳಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿ: 23/03/2017 ರಂದು

ಮಧ್ಯಾಹ್ನ 3-45 ಘಂಟೆಯಿಂದ 4-45 ಘಂಟೆಯವರೆಗೆ ಬೆಳಗಾವಿ ಎಸಿಬಿ ಕಛೇರಿಯಲ್ಲಿ ಬರೆದ ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

iii) ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ ದಾಳಿ ತಂಡದವರು, ಎದುರುದಾರರ ಕಾರ್ಯಾಲಯದ ಹತ್ತಿರ ಹೋಗಿ ಗುಪ್ತವಾಗಿ ನಿಂತುಕೊಂಡಿದ್ದು ದೂರುದಾರರನ್ನು, ಅವರ ಮಾವ ಮಹಮ್ಮದ್‌ಶರೀಫ ಹಾಗೂ ನೆರಳು ಸಾಕ್ಷಿ ಮಾರುತಿ ಮೋಂಡೆ ಇವರುಗಳನ್ನು 1ನೇ ಮಹಡಿಯಲ್ಲಿರುವ ಎದುರುದಾರರ ಕಛೇರಿಯ ಒಳಗೆ ಕಳುಹಿಸಿದ್ದು, ಕಛೇರಿಯ ಕ್ಯಾಬಿನ್‌ನಲ್ಲಿ 1ನೇ ಎದುರುದಾರರು ಕುಳಿತಿದ್ದು ಸದರಿಯವರನ್ನು ಭೇಟಿ ಮಾಡಲು ಹಣ ತಂದಿದ್ದೀಯಾ ಎಂದು ಕೇಳಿದರು. ದೂರುದಾರರು ತಂದಿರುವುದಾಗಿ ಹೇಳಲಾಗಿ 2ನೇ ಎದುರುದಾರರಿಗೆ ಹಣ ನೀಡಿ ಕೆಲಸ ಮಾಡಿಕೊಳ್ಳಲು ತಿಳಿಸಿದರು. ಆಗ ದೂರುದಾರರು ನೀವೇ ಕರೆದು 2ನೇ ಎದುರುದಾರರಿಗೆ ಹೇಳಿರಿ ಎಂದಾಗ 1ನೇ ಎದುರುದಾರರು 2ನೇ ಎದುರುದಾರರನ್ನು ಕರೆದು ಹಣ ತೆಗೆದುಕೊಂಡು ಅವರ ಕೆಲಸ ಮಾಡಿಕೊಡು ಎಂದು ಹೇಳಿದರು. ನಂತರ 2ನೇ ಎದುರುದಾರರು ತಮ್ಮ ಟೇಬಲ್ ಹತ್ತಿರ ಬಂದು ಬಲಗೈನಿಂದ ಹಣವನ್ನು ಸ್ವೀಕರಿಸಿ ತಮ್ಮ ಟೇಬಲ್ ಡ್ರಾನಲ್ಲಿ ಇಟ್ಟುಕೊಂಡಿರುತ್ತಾರೆ. ಆಗ ಸುಮಾರು 5-30 ಘಂಟೆ ಆಗಿದ್ದು ದೂರುದಾರರು ತನಿಖಾಧಿಕಾರಿಗೆ ತಲೆ ಒರೆಸಿಕೊಳ್ಳುವ ಮೂಲಕ ಸಂಜ್ಞೆ ನೀಡಿರುತ್ತಾರೆ. ಸಂಜ್ಞೆ ನೀಡಿದ ತಕ್ಷಣ ತನಿಖಾಧಿಕಾರಿಗಳು ಕಛೇರಿಯ ಒಳಗಡೆ ಬಂದು ತಮ್ಮ ಪರಿಚಯ ಮಾಡಿಕೊಂಡು ಪ್ರಕರಣ ದಾಖಲಾದ ಬಗ್ಗೆ ತಿಳಿಸಿ, ಎದುರುದಾರರಿಗೆ ತನಿಖೆಗೆ ಸಹಕರಿಸುವಂತೆ ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ಸ್ಥಳದಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ 2ನೇ ಎದುರುದಾರರ ಬಲಗೈ ಬೆರಳುಗಳನ್ನು ತೊಳೆಯಲಾಗಿ ಅದು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಎಡಗೈ ತೊಳೆಯಲಾಗಿ ಯಾವುದೇ ಬಣ್ಣ ಬಂದಿರುವುದಿಲ್ಲ. 2ನೇ ಎದುರುದಾರರನ್ನು ಹಣದ ಬಗ್ಗೆ ಕೇಳಲಾಗಿ ಟೇಬಲ್ ಡ್ರಾದಲ್ಲಿ ಇಟ್ಟಿರುವುದಾಗಿ ತಿಳಿಸಿದ್ದು ಪಂಚ-2 ಪ್ರಕಾಶ ಕೋಟಿ ಇವರು ನೋಟಿನ ನಂಬರ್‌ಗಳನ್ನು ತಾವು ಈ ಮೊದಲು ಬರೆದುಕೊಂಡ ನಂಬರ್‌ನೊಂದಿಗೆ ತಾಳೆ ಮಾಡಿ ನೋಡಲಾಗಿ ತಾಳೆಯಾಗಿದ್ದು, ತನಿಖಾಧಿಕಾರಿಗಳು ಹಣವನ್ನು ಅಮಾನತ್‌ಪಡಿಸಿಕೊಂಡಿರುತ್ತಾರೆ. ಹತ್ತಿಯ ತುಂಡನ್ನು ತೆಗೆದುಕೊಂಡು ಹಣ ಇಟ್ಟ ಡ್ರಾ ದ ಸ್ಥಳವನ್ನು ಒರೆಸಿ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಎದುರುದಾರರುಗಳ ರಕ್ಷಣಾತ್ಮಕ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. 1ನೇ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡಿದ್ದೇನೆಂದರೆ, ದೂರುದಾರರು ಖರೀದಿ ಮಾಡಿಸಿಕೊಳ್ಳಲು ಅರ್ಜಿ ಸಲ್ಲಿಸಿದ್ದು, ಆ ಕುರಿತಂತೆ ವರದಿ ನೀಡಲು ಕೆಳಗಿನ ಅಧಿಕಾರಿಗೆ ಕಡತವನ್ನು ನೀಡಿರುತ್ತೇನೆ. ವಿಷಯ

ನಿರ್ವಾಹಕರು ಹಣಕ್ಕಾಗಿ ಬೇಡಿಕೆ ಇಟ್ಟ ಬಗ್ಗೆ ದೂರುದಾರರು ತಿಳಿಸಿದ್ದು, ಅದನ್ನು ನಿಮ್ಮ ಹಂತದಲ್ಲಿ ಬಗೆಹರಿಸಿಕೊಂಡು ಕಡತವನ್ನು ಮಂಡಿಸಲು ಸೂಚಿಸಿರುತ್ತೇನೆ. ಆದರೆ, ಈವರೆಗೂ ಕಡತ ತನ್ನಲ್ಲಿಗೆ ಬಂದಿಲ್ಲವೆಂದು ಸಮಜಾಯಿಷಿಯಲ್ಲಿ ತಿಳಿಸಿರುತ್ತಾರೆ. ಅದೇ ಪ್ರಕಾರ 2ನೇ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ತಾನು ಲಂಚವನ್ನು ಕೇಳಿರುವುದಿಲ್ಲ. ದೂರುದಾರರು ಬೇರೆ ನಿವೇಶನದಲ್ಲಿ 2 ಮೀಟರ್‌ನಷ್ಟು ಅತಿಕ್ರಮಣ ಮಾಡಿದ್ದು, ಅದಕ್ಕಾಗಿ ಕೆಲಸ ಮಾಡುವುದು ತಡವಾಗಿರುತ್ತದೆ ಎಂದು ಬರೆದುಕೊಂಡಿರುತ್ತಾರೆ. ಸದರಿಯವರ ಸಮಜಾಯಿಷಿ ಬಗ್ಗೆ ನೆರಳು ಸಾಕ್ಷಿಯನ್ನು ವಿಚಾರಿಸಲಾಗಿ ಎದುರುದಾರರು ಬರೆದುಕೊಟ್ಟ ಸಮಜಾಯಿಷಿಯು ಸುಳ್ಳಿನಿಂದ ಕೂಡಿರುತ್ತದೆ ಎಂದು ನುಡಿದಿರುತ್ತಾರೆ. ಮುಂದುವರೆದು ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಸಂಪೂರ್ಣ ಕಡತ (236 ಪೇಜ್) ವನ್ನು, ಹಾಗೂ ಹಾಜರಾತಿ ಪುಸ್ತಕವನ್ನು ಅಮಾನತ್ ಪಡಿಸಿಕೊಂಡಿರುತ್ತಾರೆ. ಲಂಚ ನೀಡುವ ಕಾಲಕ್ಕೆ ದೂರುದಾರರ ಮಾವನವರ ಮೊಬೈಲ್‌ನಲ್ಲಿ ರೆಕಾರ್ಡ್ ಆದ ಸಂಭಾಷಣೆಯನ್ನು ಲ್ಯಾಪ್‌ಟಾಪ್ ಮೂಲಕ ಎರಡು ಡಿ.ವಿ.ಡಿ.ಗೆ ಕಾಪಿ ಮಾಡಿಕೊಂಡಿರುತ್ತಾರೆ. ಎದುರುದಾರರ ಹಾಗೂ ದೂರುದಾರರ ಮಾದರಿ ಧ್ವನಿಯನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ ತಜ್ಞರ ಅಭಿಪ್ರಾಯ ಪಡೆದುಕೊಳ್ಳಲು ತನಿಖಾಧಿಕಾರಿ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡು ಡಿ.ವಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ಎದುರುದಾರರ ಕಛೇರಿಯಲ್ಲಿ ದಿ: 23/03/2017 ರಂದು ಸಮಯ 5-30 ರಿಂದ ರಾತ್ರಿ 10-00 ಘಂಟೆಯವರೆಗೆ ಬರೆದ ಮಹಜರಿನಲ್ಲಿ ದಾಖಲಿಸಿಕೊಂಡಿರುತ್ತಾರೆ.

iv) 2ನೇ ಎದುರುದಾರರ ಬಲಗೈಯನ್ನು ತೊಳೆದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಫಿನಾಪ್ತಲಿನ್ ಅಂಶ ಪತ್ತೆಯಾಗಿರುವುದಾಗಿ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಆರ್ಟಿಕಲ್ ನಂ: 6 ಮತ್ತು 16 ರಲ್ಲಿ ರೆಕಾರ್ಡ್ ಆದ ಒಂದು ಸಂಭಾಷಣೆಯು ಆರ್ಟಿಕಲ್ ನಂ: 17ರಲ್ಲಿರುವ 1ನೇ ಎದುರುದಾರರ ಮಾದರಿ ಸಂಭಾಷಣೆಗೆ ತಾಳೆಯಾಗುತ್ತದೆ ಎಂದು ಹಾಗೂ ಆರ್ಟಿಕಲ್ ನಂ: 6 ಮತ್ತು 16 ರಲ್ಲಿ ರೆಕಾರ್ಡ್ ಆದ ಇನ್ನೊಂದು ಸಂಭಾಷಣೆಯು ಆರ್ಟಿಕಲ್ ನಂ: 18 ರಲ್ಲಿರುವ 2ನೇ ಎದುರುದಾರರ ಮಾದರಿ ಸಂಭಾಷಣೆಗೆ ತಾಳೆಯಾಗುತ್ತದೆ ಎಂದು ತಜ್ಞರು ಅಭಿಪ್ರಾಯಪಟ್ಟಿರುತ್ತಾರೆ.

v) ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರುಗಳನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತಾರೆ. 2ನೇ ಎದುರುದಾರರನ್ನು ಸೇವೆಯಿಂದ ವಜಾ ಮಾಡಲು

ಅಧಿಕಾರಹೊಂದಿದ ಪ್ರಾಧಿಕಾರದಿಂದ ಸದರಿಯವರನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ.

3. ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರಿಗೆ ಜಾರಿ ಮಾಡಿ ಸದರಿಯವರ ಸಮಜಾಯಿಷಿಯನ್ನು ಪಡೆದುಕೊಂಡಿದ್ದು, 1ನೇ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡಿದ್ದೆನೆಂದರೆ, ಪರಿವೀಕ್ಷಣಾ ಟಿಪ್ಪಣಿಯ ಎಲ್ಲಾ ಆಪಾದನೆಗಳನ್ನು ಸಂಪೂರ್ಣವಾಗಿ ನಿರಾಕರಿಸಿರುತ್ತಾನೆ. ಕ್ರಯ ಪತ್ರ ಮಾಡಿಕೊಡಲು ತನಗೆ ಅಧಿಕಾರವಿರುವುದಿಲ್ಲ. ದೂರುದಾರರ ಅರ್ಜಿಯು ತನ್ನ ಹಂತಕ್ಕೆ ಬಂದಿರುವುದಿಲ್ಲ. ದೂರುದಾರರಿಗೆ ತಾನು ಲಂಚಕ್ಕೆ ಬೇಡಿಕೆ ಇಟ್ಟಿಲ್ಲ, ತನ್ನ ಹತ್ತಿರ ಯಾವುದೇ ಕಡತ ಬಾಕಿಯಿರುವುದಿಲ್ಲ. ಈಗಾಗಲೇ ಬೆಳಗಾವಿ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದ್ದು, ಅದಕ್ಕೆ ಸಮನಾಂತರವಾಗಿ ಇನ್ನೊಂದು ವಿಚಾರಣೆ ನಡೆಸುವುದು ಸರಿಯಿಲ್ಲವೆಂದು ನಿವೇದಿಸಿಕೊಂಡಿರುತ್ತಾರೆ.

4. ಅದೇ ಪ್ರಕಾರ 2ನೇ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ತಾನು ಖರೀದಿ ಪತ್ರ ಮಾಡಿಕೊಡಲು ಲಂಚಕ್ಕೆ ಬೇಡಿಕೆಯಿಟ್ಟಿರುವುದಿಲ್ಲ ಮತ್ತು ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿದ ವಿಷಯ ತನಗೆ ತಿಳಿದಿರುವುದಿಲ್ಲ. ತನಿಖಾಧಿಕಾರಿಗಳು ಕಚೇರಿಗೆ ಬಂದು ಪ್ರಕ್ರಿಯೆ ಜರುಗಿಸಿರುವ ಬಗ್ಗೆ ತನ್ನ ವಿರೋಧವಿರುತ್ತದೆ ಎಂದು ಹಾಗೂ ರಾಸಾಯನಿಕ ತಜ್ಞರ ಅಭಿಪ್ರಾಯ ಸತ್ಯಕ್ಕೆ ದೂರವಾಗಿರುತ್ತದೆ. ಸುಳ್ಳು ದೂರಿನ ಆಧಾರದ ಮೇಲೆ ತನ್ನನ್ನು ಸೇವೆಯಿಂದ ವಜಾ ಮಾಡಿರುತ್ತಾರೆ. ಇದರಿಂದಾಗಿ ತನ್ನ ಆರೋಗ್ಯ ಹಾಗೂ ಪ್ರತಿಷ್ಠೆಗೆ ಕುಂದು ಉಂಟಾಗಿರುತ್ತದೆ ಎಂದು ನಿವೇದಿಸಿಕೊಂಡಿರುತ್ತಾರೆ.

5. ತನಿಖಾಧಿಕಾರಿಗಳು ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ನಂಬದಿರಲು ಹಾಗೂ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ನಿವೇದಿಸಿಕೊಂಡ ನಿಲುವುಗಳನ್ನು ನಂಬಲು ಈ ಹಂತದಲ್ಲಿ ಸಾಕಷ್ಟು ಪುರಾವೆಗಳು ಕಂಡುಬರುವುದಿಲ್ಲ. 1ನೇ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಕ್ರಿಮಿನಲ್ ಮೊಕದ್ದಮೆಯ ಜೊತೆಗೆ ಸಮಾನಂತರವಾಗಿ ಇಲಾಖಾ ವಿಚಾರಣೆ ನಡೆಸಲು ಬರುವುದಿಲ್ಲ ಎಂಬ ನಿಲುವು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳಿಗೆ ವ್ಯತಿರಿಕ್ತವಾಗಿರುತ್ತದೆ. ಮುಂದುವರೆದು, 1ನೇ ಎದುರುದಾರರು ತಮ್ಮ ಹತ್ತಿರ ಕಡತ ಬಾಕಿಯಿರಲಿಲ್ಲ ಮತ್ತು ತನಗೆ ಖರೀದಿಯನ್ನು ಅನುಮೋದಿಸಲು ಅಧಿಕಾರವಿರಲಿಲ್ಲ ಎಂಬ ನಿಲುವನ್ನು ಕೂಡ ಈ ಹಂತದಲ್ಲಿ ಪರಿಗಣಿಸಲು ಸಾಧ್ಯವಿಲ್ಲ.

6. ದೂರಿನಲ್ಲಿ ಮಾಡಿದ ಆಪಾದನೆ, ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆ ಹಾಗೂ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಗಿ ನೀವು ನಿಮ್ಮ ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ ಹಾಗೂ ಶ್ರದ್ಧೆಯನ್ನು ಹೊಂದಿರದೇ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು,

ಭ್ರಷ್ಠಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1)(i) ರಿಂದ (iv) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟದಲ್ಲಿ ಕಂಡುಬರುತ್ತದೆ.

7. 1 ಮತ್ತು 2ನೇ ಎದುರುದಾರರು ಈಗಾಗಲೇ ಸೇವೆಯಿಂದ ನಿವೃತ್ತರಾಗಿದ್ದು, ಮೇಲ್ಕಂಡ ಆಪಾದನೆಗಳಿಗೆ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಕರ್ನಾಟಕ ನಾಗರೀಕ ಸೇವಾ ನಿಯಮಗಳು 214 (2)(ಬಿ)(ii) ಅಡಿಯಲ್ಲಿ ಅನುಮತಿ ನೀಡಿ, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ಅನ್ವಯ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(4) ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು (3) ತಿಂಗಳ ಒಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

22/12/21

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.